ಈ ದಿನ ದಿನಾಂಕಃ 28-11-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ 1 ರಿಂದ 8, 10 ರಿಂದ 16ನೇ ಪ್ರತಿವಾದಿಗಳ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ</u>**

ನನ್ನ ದಾವೆಗೆ ಪೂರಕವಾಗಿ ಈ ಕೆಳಗಿನ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗೆ ಒಳಪಡಿಸಲು ವಿನಂತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೆ ಒಳಪಡಿಸಲಾಯಿತು.

| ಕ್ರ.ಸಂ | ದಾಖಲಾತಿಯ ವಿವರ | ನಿಶಾನೆ ಸಂಖ್ಯೆ |
|---|---|---|
| 1 | ದಿಃ 16.04.1985 ರ ಜುಬಾನಿ ಹಿಸ್ಸಾ ಪತ್ರ<br>ಸದರಿ ದಾಖಲೆ ಮೇಲೆ ನಿಗದಿತ ಮುದ್ರಾಂಕ ಶುಲ್ಕವನ್ನು ದಂಡದೊಂದಿಗೆ ಜಿಲ್ಲಾನೊಂದಣಾದಿಕಾರಿಗಳ ಬಗ್ಗೆ ಬರಣ ಮಾಡಿದ್ದು ಅ ಬಗ್ಗೆ ಚಲನ್ ನ್ನು ಹಾಜರುಪಡಿಸಿರುತ್ತಾರೆ. | ನಿಡಿ 22 |
| 2 | ಸದರಿ ದಾಖಲೆಯನ್ನು ಸಿ ಎಸ್ ಹಾಲೇಶಪ್ಪನವರು ದಸ್ತೂರ್ ಮಾಡಿರುತ್ತಾರೆ ಮತ್ತು ಸಾಕ್ಷಿದಾರರಾಗಿ ಸಹಿಯನ್ನು ಮಾಡಿರುತ್ತಾರೆ. ಸದರಿಯವರ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ನಿಡಿ 22ಎ ಎಂದು ಗುರುತಿಸಲಾಯಿತು. | ನಿಡಿ 22 ಎ |
| 3 | ಗ್ರಾಮ ಪಂಚಾಯಿತಿ ಆಸ್ತಿ ಸಮೀಕ್ಷೆಯ 3 ಪುಟಗಳುಳ್ಳ ಪಟ್ಟಿ | ನಿಡಿ 23 |

**<u>ಪಾಟೀಸವಾಲು ವಾದಿ ಪರ ವಕೀಲರಿಂದಃ</u>**

ವಾದಿ ಪರ ವಕೀಲರು ಗೈರು ಹಾಜರಿದ್ದು ನ್ಯಾಯಾದಾನದ ಹಿತದೃಷ್ಟಿಯಿಂದ ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.